| ಕರ್ನಾಟಕ ವಿಧಾನ ಪರಿಷತ್ತು | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 88(605) |
| 2 | ಮಾನ್ಯ ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ |
| 3 | ಉತ್ತರಿಸಬೇಕಾದ ದಿನಾಂಕ | : | 11.12.2023. |
| 4 | ಉತ್ತರಿಸಬೇಕಾದ ಸಚಿವರು | : | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆಯ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಹಿಮ್ಸ್ ಡೀನ್ ಪದವಿಗೆ ಆಯ್ಕೆಯಾಗಿರುವ ಬಗ್ಗೆ ತ್ರಿ-ಸದಸ್ಯ ಪೀಠದಿಂದ ದಿನಾಂಕ:17.02.2017 ಮತ್ತು 15.07.2017 ರಲ್ಲಿ ತಾಂತ್ರಿಕ ಅನುಮೋದನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರಿಟ್ ಪಿಟಿಷನ್ ಸಂಖ್ಯೆ: 21825/2019 ದಿನಾಂಕ:23.09.2019ರಲ್ಲಿ ನಕಲಿ ದಾಖಲೆ ಸೃಷ್ಟಿಸಿರುವುದು ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶಗೊಂಡಿರುವುದು ನಿಜವೇ; ಈ ಬಗ್ಗೆ ಕೈಗೊಂಡ ಕ್ರಮವೇನು ; (ಸಂಪೂರ್ಣ ವಿವರ ನೀಡುವುದು) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ಡಾ. ಬಿ.ಸಿ. ರವಿಕುಮಾರ್‌ರವರು ಸುಳ್ಳು ದಾಖಲೆಗಳ ಆಧಾರದಲ್ಲಿ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಆಯ್ಕೆಯಾಗಿದ್ದಾರೆ ಎನ್ನಲಾದ ಆರೋಪಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ದಾಖಲಾದ ಪ್ರಕರಣ ಸಂಖ್ಯೆ HRC No.864/10/2017(B-2) ರಲ್ಲಿ ಗೌ. ಆಯೋಗವು ದಿನಾಂಕ 17.02.2017 ರಂದು ನೀಡಿದ ಆದೇಶದಲ್ಲಿ ಡಾ. ಬಿ.ಸಿ. ರವಿಕುಮಾರ್‌ರವರ ವಿರುದ್ಧದ ದೂರಿಗೆ ಸಂಬಂಧಿಸಿದಂತೆ, ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಿದ್ದರ ಹಿನ್ನೆಲೆಯಲ್ಲಿ, ಡಾ. ಬಿ.ಸಿ. ರವಿಕುಮಾರ್‌ರವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ ಆಕುಕ 64 ಕೆವಿಎಂ 2017, ದಿನಾಂಕ 15.07.2017 ರಲ್ಲಿ ವಿಚಾರಣಾ ಸಮಿತಿಯನ್ನು ನೇಮಿಸಲಾಗಿತ್ತು (ಅನುಬಂಧ-1).<br><br>ವಿಚಾರಣಾ ಸಮಿತಿಯು ದಿನಾಂಕ 03.01.2018 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿ, "ಡಾ. ಬಿ.ಸಿ. ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆರವರಿಗೆ ಕೆ.ವಿ.ಜಿ. ಮೆಡಿಕಲ್ ಕಾಲೇಜ್, ಸುಳ್ಯ ದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ನೀಡಿದಾಗ 15 ತಿಂಗಳುಗಳ ಬೋಧನಾ ಅನುಭವದ ಕೊರತೆ ಇದ್ದು, ಇದು ಎಂ.ಸಿ.ಐ. ನಿಯಮಗಳನ್ವಯ ಬೋಧನಾ ನ್ಯೂನತೆ ಎಂದು ಪರಿಗಣಿಸಬಹುದಾಗಿರುತ್ತದೆ. ಉಳಿದ ದೂರಿನ ಅಂಶಗಳಾದ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ, ಅಧಿಕಾರ ದುರ್ಬಳಕೆ, ವಿವಿಧ ತನಿಖೆಗಳ ಬಗ್ಗೆ ಅಭಿಪ್ರಾಯ ನೀಡಲು ದಾಖಲೆಗಳನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ" ಎಂದು ವರದಿ ನೀಡಿತ್ತು (ಅನುಬಂಧ-2).<br><br>ನಂತರ ದಿನಾಂಕ 31.05.2019 ರಲ್ಲಿ, ವಿಚಾರಣಾ ಸಮಿತಿಯು ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, "ಹಿಮ್ಸ್, ಹಾಸನ |

ರವರು ಸಲ್ಲಿಸಿರುವ ದಾಖಲೆಗಳ ಪ್ರಕಾರ, ಪಿ.ಜಿ.ಐ., ಚಂಡೀಗಡದಲ್ಲಿ 05 ತಿಂಗಳ ಸೀನಿಯರ್ ರೆಸಿಡೆಂಟ್ ಬೋಧನಾ ಅನುಭವ, ಕಸ್ತೂರಬಾ ಮೆಡಿಕಲ್ ಕಾಲೇಜ್, ಮಣಿಪಾಲದಲ್ಲಿ 3 ವರ್ಷ 6½ ತಿಂಗಳ ಸಹಾಯಕ ಪ್ರಾಧ್ಯಾಪಕರ ಅನುಭವ, ಕೆ.ವಿ.ಜಿ. ಕಾಲೇಜಿನಲ್ಲಿ 1 ವರ್ಷ 5½ ತಿಂಗಳು ಸಹಾಯಕ ಪ್ರಾಧ್ಯಾಪಕರ ಅನುಭವ ಮತ್ತು ಅದೇ ಕಾಲೇಜಿನಲ್ಲಿ 3 ವರ್ಷ 10 ತಿಂಗಳು ಸಹ ಪ್ರಾಧ್ಯಾಪಕರಾಗಿ ಅನುಭವ ಇರುವುದಾಗಿ ತಿಳಿಸಿರುತ್ತಾರೆ. ಈ ಎಲ್ಲದರ ಒಟ್ಟು ಬೋಧನಾ ಅನುಭವ 9 ವರ್ಷ 3 ತಿಂಗಳುಗಳಾಗಿರುತ್ತದೆ. ಆದರೆ, ಕೆ.ವಿ.ಜಿ. ವೈದ್ಯಕೀಯ ಕಾಲೇಜಿಗೆ ಎಲ್.ಒ.ಪಿ. ದೊರಕಿದ ನಂತರದ ಬೋಧನಾ ಅನುಭವವನ್ನು ಗಣನೆಗೆ ತೆಗೆದುಕೊಂಡರೆ ಅವರ ಒಟ್ಟು ಅನುಭವದಲ್ಲಿ ಒಂದು ವರ್ಷದ ಬೋಧನಾ ಅನುಭವದ ಕೊರತೆ ಕಂಡು ಬರುತ್ತದೆ" ಎಂದು ವರದಿ ನೀಡಿತ್ತು (ಅನುಬಂಧ-3).

ಈ ಮಧ್ಯೆ, ತಮ್ಮ ವಿರುದ್ಧ ವಿಚಾರಣೆಗೆ ದಿನಾಂಕ 15.07.2017 ರಲ್ಲಿ ಸಮಿತಿ ರಚಿಸಿರುವುದನ್ನು ಪ್ರಶ್ನಿಸಿ, ಡಾ. ಬಿ.ಸಿ. ರವಿಕುಮಾರ್‌ರವರು ಗೌ. ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ 21825/2019ರಲ್ಲಿ ಗೌ. ನ್ಯಾಯಾಲಯವು ದಿನಾಂಕ:23.07.2019ರಂದು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ:

> "Concerned respondents are hereby directed to complete the enquiry proceeding within a period of three months from the date of receipt of this order, since petitioner is facing various allegations relating to production of fake documents in obtaining certain service benefits in the respondent-Institution".

ವಿಚಾರಣಾ ಸಮಿತಿಯ ವರದಿಗೆ ಸಂಬಂಧಿಸಿದಂತೆ, ಆಕ್ಷೇಪಣೆ ಏನಾದರೂ ಇದ್ದಲ್ಲಿ, ಪೂರಕ ದಾಖಲೆಗಳೊಂದಿಗೆ ಸಮಜಾಯಿಷಿಯನ್ನು ಸಲ್ಲಿಸುವಂತೆ ಡಾ. ಬಿ.ಸಿ. ರವಿಕುಮಾರ್‌ರವರಿಗೆ ದಿನಾಂಕ 29.11.2019ರ ಸರ್ಕಾರದ ಪತ್ರದಲ್ಲಿ ಸೂಚಿಸಿದ್ದರ ಮೇರೆಗೆ, ಅವರು ದಿನಾಂಕ 03.12.2019ರ ಪತ್ರದಲ್ಲಿ ಸಮಜಾಯಿಷಿ ಸಲ್ಲಿಸುತ್ತಾ, LOP ಗಿಂತ ಮುಂಚಿನ ಕಾರ್ಯ ಅನುಭವವನ್ನು ಬೋಧನಾನುಭವವೆಂದು ಪರಿಗಣಿಸಬಹುದೆಂದು ಭಾರತೀಯ ವೈದ್ಯಕೀಯ ಪರಿಷತ್ತಿನ (MCI) ದಿನಾಂಕ 14.02.2001ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನವಾಗಿರುವುದರಿಂದ, ವಿಚಾರಣಾ ಸಮಿತಿಯ ಅಭಿಪ್ರಾಯವನ್ನು ಪರಿಗಣಿಸದೇ ತಮ್ಮ ವಿರುದ್ಧದ ಆರೋಪವನ್ನು ಮುಕ್ತಾಯಗೊಳಿಸುವಂತೆ ಕೋರಿದ್ದರು.

<table>
<tr>
<td></td>
<td></td>
<td>ವಿಚಾರಣಾ ಸಮಿತಿಯ ವರದಿ ಮತ್ತು ಆ ಸಂಬಂಧ ಡಾ. ಬಿ.ಸಿ. ರವಿಕುಮಾರ್‌ರವರ ಸಮಜಾಯಿಷಿಯನ್ನು ಪರಿಶೀಲಿಸಿ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆರವರು ಕಡತದಲ್ಲಿ ನೀಡಿರುವ ಅಭಿಪ್ರಾಯ ಈ ಕೆಳಗಿನಂತಿದೆ:<br>"…. Dr. B.C. Ravikumar teaching experience can be considered from date of joining. As MCI is apex body & it itself has clarified clearly about teaching experience, so it has to be considered & matter can be closed."<br><br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯರವರ ಮೇಲ್ಕಂಡ ಅಭಿಪ್ರಾಯವನ್ನು ಪರಿಗಣಿಸಿ, ಡಾ. ಬಿ.ಸಿ. ರವಿಕುಮಾರ್, ಇವರ ವಿರುದ್ಧ ಪ್ರಕರಣವನ್ನು ಮುಕ್ತಾಯಗೊಳಿಸಲು ಕಡತದಲ್ಲಿ ಸರ್ಕಾರವು ನಿರ್ಧರಿಸಿ, ದಿನಾಂಕ 21.12.2019 ರಂದು ಮುಕ್ತಾಯಗೊಳಿಸಿರುತ್ತದೆ.<br><br>ಡಾ. ಬಿ.ಸಿ. ರವಿಕುಮಾರ್, ಇವರ ವಿರುದ್ಧದ ಆರೋಪಗಳನ್ನು ಮುಕ್ತಾಯಗೊಳಿಸಿರುವುದಕ್ಕೆ ಸಂಬಂಧಿಸಿದಂತೆ, ಮಾಹಿತಿಯನ್ನು ದಿನಾಂಕ 05.02.2020ರ ಪತ್ರ ಮುಖೇನ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಗಮನಕ್ಕೆ ತರಲಾಗಿರುತ್ತದೆ (ಅನುಬಂಧ-4).</td>
</tr>
<tr>
<td>ಆ)</td>
<td>ಹಾಸನ ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ/ಡೀನ್‌ರ ಪದವಿಗೆ ಆಯ್ಕೆ ಮಾಡಲು ಇರುವ ಮಾರ್ಗ ಸೂಚಿಗಳೇನು; ಮಾರ್ಗಸೂಚಿಗಳನ್ವಯ ಅಧಿಕಾರಿಗಳು ಸುಳ್ಳು/ನಕಲಿ ದಾಖಲೆ ಸೃಷ್ಟಿಸಿ ಉನ್ನತ ಹುದ್ದೆಗೆ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಅಂತಹ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿರುತ್ತದೆ; ತಪ್ಪಿತಸ್ಥ ಅಧಿಕಾರಿಗಳಿಗೆ ಸರ್ಕಾರದಿಂದ ನೀಡಿರುವ ಸವಲತ್ತುಗಳು ಮತ್ತು ಸಂಬಳ ಹಾಗೂ ಇತರೆ ಭತ್ಯೆಗಳನ್ನು ಅವರಿಂದ ವಸೂಲಿ ಮಾಡಿ ಸರ್ಕಾರಕ್ಕೆ ಎಷ್ಟು ಮೊತ್ತ ಪಾವತಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು</td>
<td>ಎನ್.ಎಮ್.ಸಿ ಮಾರ್ಗಸೂಚಿಗಳನ್ವಯ ಸಂಸ್ಥೆಯ ನಿರ್ದೇಶಕರ ಹುದ್ದೆಯ ನೇಮಕಾತಿಗೆ ಈ ಕೆಳಕಂಡ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿದೆ.
<table>
<tr><th>Post</th><th>Academic Qualification</th><th>Experience</th></tr>
<tr><td>Dean cum Director</td><td>Should possess the recognized Post Graduate medical qualification and other academic qualification from a recognized medical institution with a minimum of 10 years teaching experience as Professor / Associate Professor / Reader in a Medical College / Institution, out of which at least 05 years should be as Professor in a Department.</td><td>1.Candidates for the said post shall be selected from amongst the Professors in the Government Autonomous Medical Institutions, by inviting applications.<br>2.05 senior most Professor amongst the applicants shall be short listed and considered by the Governing Council for the said appointment.<br>3.Candidates shall have administrative experience either as Medical</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr>
<td></td>
<td></td>
<td>Superintendent or as Head of the Department or as Professor at least for 05 years<br>4. Candidates shall satisfy Medical Council India norms for appointment to the said post.<br>5. Maximum upper age limit for the said post is 58 years</td>
</tr>
</table>
ಡಾ. ಬಿ.ಸಿ. ರವಿಕುಮಾರ್, ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿದ್ದರಿಂದ, ಡಾ. ಬಿ.ಸಿ. ರವಿಕುಮಾರ್, ಇವರಿಗೆ ನೀಡಿರುವ ಸಂಬಳ ಹಾಗೂ ಇತರೆ ಭತ್ಯೆಗಳನ್ನು ಹಿಂಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.
</td>
</tr>
<tr>
<td>ಇ)</td>
<td>ಹಿಮ್ಸ್ ನಿರ್ದೇಶಕರು ಡೀನ್/ನಿರ್ದೇಶಕರು ಆದ ಸಂದರ್ಭದಿಂದ ಈವರೆಗೆ ಎಷ್ಟು ಟೆಂಡರ್ ಕಾಮಗಾರಿಗಳನ್ನು ಅನುಮೋದಿಸಿರುತ್ತಾರೆ ಮತ್ತು ಕೋವಿಡ್ 2019ರ ಸಂದರ್ಭದಲ್ಲಿ ಯಾವ ಯಾವ ಯಂತ್ರೋಪಕರಣ ಖರೀದಿಸಿರುತ್ತಾರೆ? (ಸಂಪೂರ್ಣ ವಿವರ ನೀಡುವುದು)</td>
<td>ಪ್ರಸ್ತುತ ಹಿಮ್ಸ್, ಹಾಸನ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಬಿ.ಸಿ. ರವಿಕುಮಾರ್, ಇವರ ಅವಧಿಯಲ್ಲಿ ಈವರೆಗೆ 15 ಟೆಂಡರ್ ಕಾಮಗಾರಿಗಳನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಮತ್ತು ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕೈಗೊಳ್ಳಲಾಗಿರುತ್ತದೆ ವಿವರಗಳನ್ನು ಅನುಬಂಧ-5 ರಲ್ಲಿ ನೀಡಿದೆ.<br><br>ಕೋವಿಡ್-19 ಸಂದರ್ಭದಲ್ಲಿ 50 ಯಂತ್ರೋಪಕರಣಗಳನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆ ಮತ್ತು ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ಹಾಗೂ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧ-6ರಲ್ಲಿ ನೀಡಿದೆ.</td>
</tr>
</table>

**ಸಂಖ್ಯೆ:** ಎಂಇಡಿ 211 ಕೆಯುಎಂ 2023

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

ಅನುಬಂಧ-01

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 64 ಕೆವಿಎಂ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 15/07/2017

## ಅಧಿಸೂಚನೆ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ದಿನಾಂಕ 28/02/2017 ರಂದು ನೀಡಿರುವ ಆದೇಶದನ್ವಯ ನಕಲಿ ದಾಖಲೆಗಳ ಆಧಾರದ ಮೇಲೆ ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ನೇಮಕವಾಗಿರುವ ಡಾ. ಬಿ.ಸಿ ರವಿಕುಮಾರ್ ಇವರ ವಿದ್ಯಾರ್ಹತೆ, ಅಧಿಕಾರ ದುರುಪಯೋಗದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸವಿವರವಾದ ವರದಿಯನ್ನು ಒಂದು ತಿಂಗಳ ಒಳಗಾಗಿ ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ಈ ಕೆಳಕಂಡಂತೆ ವಿಚಾರಣಾ ಸಮಿತಿಯನ್ನು ರಚಿಸಿ ಆದೇಶಿಸಿದೆ.

| ವಿಚಾರಣಾ ಸಮಿತಿ | |
|---|---|
| ನಿರ್ದೇಶಕರು ಮತ್ತು ಡೀನ್<br>ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು | ಅಧ್ಯಕ್ಷರು |
| ಮುಖ್ಯ ಆಡಳಿತಾಧಿಕಾರಿ<br>ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು. | ಸದಸ್ಯರು |
| ಮುಖ್ಯ ಆಡಳಿತಾಧಿಕಾರಿ<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ<br>ಆನಂದರಾವ್ ವೃತ್ತ,ಬೆಂಗಳೂರು. | ಸದಸ್ಯರು |

ಇದೇ ಸಮಸಂಖ್ಯೆಯ ದಿನಾಂಕ 20/05/2017 ರಂದು ಹೊರಡಿಸಿರುವ ಅಧಿಸೂಚನೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
... ಶಾಖೆ ಹೊರಟಿಸಿದೆ
ದಿನಾಂಕ 17/07/17
ಸಹಿ ...

ಇವರಿಗೆ :

1. ಡೀನ್ ಮತ್ತು ನಿರ್ದೇಶಕರು, ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
2. ಮುಖ್ಯ ಆಡಳಿತಾಧಿಕಾರಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
3. ಮುಖ್ಯ ಆಡಳಿತಾಧಿಕಾರಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,ಆನಂದರಾವ್ ವೃತ್ತ ಬೆಂಗಳೂರು.
4. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಅನುಬಂಧ - 02

ಕರ್ನಾಟಕ ಸರ್ಕಾರ

ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ಸಂಖ್ಯೆ: ಬೌಲೇಕವೈವಿಸಂಸಂ-293/2017-18

ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ
ಬೆಂಗಳೂರು, ದಿನಾಂಕ: 03.01.2018

ರವರಿಗೆ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ),
ಬೆಂಗಳೂರು.

ಮಾನ್ಯರೇ,

ವಿಷಯ: ಡಾ: ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ವಿರುದ್ಧ ಇರುವ ದೂರುಗಳ ವಿಚಾರಣಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 64 ಕೆವಿಎಂ 2017, ದಿ: 15.7.2017.

******

ಉಲ್ಲೇಖ(1)ರಲ್ಲಿ ನಮೂದಿಸಿರುವ ಪತ್ರದಲ್ಲಿ, ಡಾ: ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರ ವಿದ್ಯಾರ್ಹತೆ, ಅಧಿಕಾರ ದುರುಪಯೋಗದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸವಿವರವಾದ ವರದಿಯನ್ನು ನೀಡುವಂತೆ ಆದೇಶಿಸಿರುತ್ತೀರಿ, ಹಾಗೂ ಈ ಬಗ್ಗೆ ವಿಚಾರಣೆಯನ್ನು ನಡೆಸಲು ನಿರ್ದೇಶಕರು ಹಾಗೂ ಡೀನ್, ಬಿ.ಎಲ್.ಸಿ.ಎಂ.ಸಿ.ಆರ್.ಐ., ಮುಖ್ಯ ಆಡಳಿತಾಧಿಕಾರಿಗಳು, ಬಿ.ಎಂ.ಸಿ.ಆರ್.ಐ., ಮತ್ತು ಮುಖ್ಯ ಆಡಳಿತಾಧಿಕಾರಿಗಳು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರೊನ್ನೊಳಗೊಂಡ ಸಮಿತಿಯನ್ನು ರಚಿಸಿರುವುದು ಸರಿಯಷ್ಟೆ.

ಆದರೆ, ಉಲ್ಲೇಖಿತ ಅಧಿಸೂಚನೆಯಂತೆ ವಿಚಾರಣೆ ನಡೆಸಲು ಮುಖ್ಯ ಆಡಳಿತಾಧಿಕಾರಿಗಳು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ಹಾಜರಿಲ್ಲದಿದ್ದರಿಂದ ನಿರ್ದೇಶಕರು ಹಾಗೂ ಡೀನ್, ಬಿ.ಎಲ್.ಸಿ.ಎಂ.ಸಿ.ಆರ್.ಐ., ಮತ್ತು ಮುಖ್ಯ ಆಡಳಿತಾಧಿಕಾರಿಗಳು, ಬಿ.ಎಂ.ಸಿ.ಆರ್.ಐ., ಇವರು ಡಾ: ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ರವರನ್ನು ಕೂಲಂಕುಷವಾಗಿ ವಿಚಾರಣೆ ನಡೆಸಿ, ವರದಿಯನ್ನು ತಯಾರಿಸಲಾಗಿರುತ್ತದೆ. ಸದರಿ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ: ಕೆ.ಎಸ್.ಮಂಜುನಾಥ್)
ನಿರ್ದೇಶಕರು ಹಾಗೂ ಡೀನ್,

3/1/2018

(2)

## ವಿಚಾರಣಾ ವರದಿ

ವಿಷಯ: ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಇವರ ವಿರುದ್ಧ ಶ್ರೀ ಹೆಚ್.ಆರ್.ರಮೇಶ ಕುಮಾರ್, ಬಿನ್ ಲೇಟ್ ಹೆಚ್.ಇ.ರಾಮಪ್ಪ, ಹಾಸನ ರವರು ನೀಡಿರುವ ದೂರಿನ ಬಗ್ಗೆ ವಿಚಾರಣೆ.

ಉಲ್ಲೇಖ: ಸರ್ಕಾರಿ ಅಧಿಸೂಚನೆ ಸಂಖ್ಯೆ: ಆಕುಕ/64/ಕೆವಿಎಂ/2017 ದಿನಾಂಕ 15-07-2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಹೆಚ್.ಆರ್. ರಮೇಶ್ ಕುಮಾರ್ ರವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ನೀಡಿರುವ ದೂರಿನ ಬಗ್ಗೆ ವರದಿಯನ್ನು ಸಲ್ಲಿಸಲು ಉಲ್ಲೇಖಿತ ಅಧಿಸೂಚನೆಯಲ್ಲಿ ಆದೇಶಿಸಲಾಗಿದೆ. ಅದರಂತೆ ವಿವಿಧ ದಿನಾಂಕಗಳಂದು ಶ್ರೀ ಹೆಚ್.ಆರ್. ರಮೇಶ್ ಕುಮಾರ್, ದೂರುದಾರರು ಹಾಗೂ ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರುಗಳನ್ನು ವಿಚಾರಣೆಗೆ ಒಳಪಡಿಸಲಾಯಿತು.

ದಿನಾಂಕ 25-11-2017ರಂದು ದೂರುದಾರರಾದ ಶ್ರೀ ರಮೇಶ್ ಕುಮಾರ್ ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ (ಅನುಬಂಧ-1). ಸದರಿ ದೂರಿನಲ್ಲಿ ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರ ನೇಮಕಾತಿ, ಬೋಧನಾನುಭವದ ಪ್ರಮಾಣಪತ್ರ, ಅಧಿಕಾರ ದುರ್ಬಳಕೆ ಇತ್ಯಾದಿಗಳ ಬಗ್ಗೆ ಆರೋಪಿಸಿರುತ್ತಾರೆ.

ಡಾ.ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರು ವಿಚಾರಣೆಗೆ ಹಾಜರಾಗಿದ್ದು, ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ, ಆದರೆ, ಸಮಿತಿಯು ಕೋರಿರುವ ಕೆಲವೊಂದು ದಾಖಲೆಗಳಾದ Form-16, (2003-04, 2004-05, 2006 April to June ) ಹಾಗೂ Income Tax returns ( 2003-04, 2004-05, 2005-06, 2006-07) (ಅನುಬಂಧ-2) ಗಳನ್ನು ಸಲ್ಲಿಸಿರುತ್ತಾರೆ.

ಉಭಯ ಪಕ್ಷಗಳ ಹೇಳಿಕೆ ಹಾಗೂ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಸಮಿತಿಯು ಈ ಕೆಳಕಂಡಂತೆ ಅಭಿಪ್ರಾಯಿಸಿದೆ.

1. ಪ್ರಾಧ್ಯಾಪಕರಾಗಿ ನೇಮಕಾತಿ:

   ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರನ್ನು ದಿನಾಂಕ 31-07-2006ರಂದು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕರಾಗಿ ನೇಮಿಸಲಾಗಿದ್ದು, ಸದರಿಯವರು ದಿನಾಂಕ 01-08-2006ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಈ ನೇಮಕಾತಿ ಆದೇಶ ಪಡೆಯುವಾಗ ಮಾನ್ಯತೆ ಪಡೆದ ಮೆಡಿಕಲ್ ಕಾಲೇಜಿನ ಬೋಧನಾನುಭವ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸದೆ ನೇಮಕಾತಿ ಆದೇಶ

ಪಡೆದಿರುತ್ತಾರೆ ಎಂದು ದೂರುದಾರರು ಆರೋಪಿಸಿದ್ದಾರೆ. ಈ ಬಗ್ಗೆ ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನೇಮಕಾತಿ/ಆಯ್ಕೆ ಸಮಿತಿಯ ನಡವಳಿಗಳನ್ನು ಸಲ್ಲಿಸಲು ದಿನಾಂಕ 20.11.2017 ರಂದು ನಡೆದ ವಿಚಾರಣೆ ದಿನಾಂಕದಂದು ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯವರಿಗೆ ಸೂಚಿಸಿದ್ದರೂ ಸಹ ಈ ದಾಖಲೆಗಳನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ.

ಆದುದರಿಂದ ಈ ಆರೋಪದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಸಮಿತಿಗೆ ಸಾಧ್ಯವಿರುವುದಿಲ್ಲ.

2. ಕೆ.ವಿ.ಜಿ.ಮೆಡಿಕಲ್ ಕಾಲೇಜ್, ಸುಳ್ಯದ ಬೋಧನಾ ಪ್ರಮಾಣ ಪತ್ರ:

ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರು ತಮ್ಮ ಬೋಧನಾನುಭವ ಪ್ರಮಾಣಪತ್ರದಲ್ಲಿ ಕೆ.ವಿ.ಜಿ.ಮೆಡಿಕಲ್ ಕಾಲೇಜ್, ಸುಳ್ಯ, ದಲ್ಲಿ, ಈ ಕೆಳಕಂಡ ದಿನಾಂಕಗಳನ್ನು ನಮೂದಿಸಿರುತ್ತಾರೆ.

- ಅಸಿಸ್ಟೆಂಟ್ ಪ್ರೊಫೆಸರ್/ಸಹಾಯಕ ಪ್ರಾಧ್ಯಾಪಕರು:
  ಈ ಹುದ್ದೆಯಲ್ಲಿ ಬೋಧನಾನುಭವವನ್ನು ದಿನಾಂಕ 25–01–2001 ರಿಂದ 21–02–2002 ಎಂದು ನಮೂದಿಸಿದ್ದು, ತದನಂತರ ಈ ಪ್ರಮಾಣಪತ್ರವನ್ನು ಮಾರ್ಪಡಿಸಿ ದಿನಾಂಕ 25–01–2001 ರಿಂದ 04–08–2002 ಎಂದು ತಿದ್ದುಪಡಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.
- ಅಸೋಸಿಯೇಟ್ ಪ್ರೊಫೆಸರ್/ಸಹ ಪ್ರಾಧ್ಯಾಪಕರು:
  ಈ ಹುದ್ದೆಯಲ್ಲಿ ಬೋಧನಾನುಭವವನ್ನು ದಿನಾಂಕ 25–05–2006 ರಿಂದ 30–06–2006 ಎಂದು ನಮೂದಿಸಿದ್ದು ತದನಂತರ ಈ ಪ್ರಮಾಣಪತ್ರವನ್ನು ಮಾರ್ಪಡಿಸಿ ದಿನಾಂಕ 04–08–2002 ರಿಂದ 30–06–2006 ಎಂದು ತಿದ್ದುಪಡಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. (ಅನುಬಂಧ–3 ಹಾಗೂ 4).

ಕೆ.ವಿ.ಜಿ.ಮೆಡಿಕಲ್ ಕಾಲೇಜಿಗೆ ಎಂ.ಸಿ.ಐ.ನಿಂದ Letter of Permission (LOP) ಯನ್ನು ದಿನಾಂಕ 19–04–2002 ರಂದು ನೀಡಲಾಗಿರುವುದರಿಂದ ಎಂ.ಸಿ.ಐ. ನಿಯಮದನ್ವಯ ಎಲ್.ಓ.ಪಿ. ದಿನಾಂಕಕ್ಕಿಂತ ಮುಂಚಿನ ಸೇವಾ ಅನುಭವವನ್ನು ಪರಿಗಣಿಸಲು ಅವಕಾಶವಿರುವುದಿಲ್ಲ ಎಂದು ಸಮಿತಿಯು ಅಭಿಪ್ರಾಯಿಸಿದೆ. ಅದುದರಿಂದ ಅವರ ಸಹಾಯಕ ಪ್ರಾಧ್ಯಾಪಕರ ಸೇವಾ ಅನುಭವದಲ್ಲಿ ಸುಮಾರು 15 ತಿಂಗಳುಗಳ ಕೊರತೆ ಕಂಡು ಬರುತ್ತದೆ.

3. **Private Practice :**

ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರು ಸುಳ್ಯದ ಕೆ.ವಿ.ಜಿ. ವೈದ್ಯಕೀಯ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ (2001–2006) ಹಾಸನದಲ್ಲಿ ಖಾಸಗಿ ಕ್ಲಿನಿಕ್ ನಡೆಸುತ್ತಿದ್ದು ಸುಳ್ಯದಲ್ಲಿ ಯಾವುದೇ ರೀತಿಯ ಭೋಧನಾ

ಮಾಡಿರುವುದಿಲ್ಲ ಎಂದು ದೂರುದಾರರು ಆರೋಪಿಸಿರುತ್ತಾರೆ ಹಾಗೂ ದಾಖಲೆಗಾಗಿ ವೈದ್ಯರ ಸಲಹಾ ಚೀಟಿಗಳನ್ನು ಸಲ್ಲಿಸಿರುತ್ತಾರೆ.

ಡಾ. ಬಿ.ಸಿ.ರವಿಕುಮಾರ್ ರವರು ವಿಚಾರಣೆ ವೇಳೆಯಲ್ಲಿ ತಾವು ವಾರಾಂತ್ಯಗಳಂದು ಸುಳ್ಯದಿಂದ ಹಾಸನಕ್ಕೆ ಬಂದಾಗ ಮಾತ್ರ ಖಾಸಗಿ ಕ್ಲಿನಿಕ್ ನಡೆಸುತ್ತಿರುವುದಾಗಿ ಹೇಳಿಕೆ ನೀಡಿದ್ದಾರೆ ಹಾಗೂ ದಾಖಲೆಗಳಿಗಾಗಿ ಕೆ.ವಿ.ಜಿ. ವೈದ್ಯಕೀಯ ಕಾಲೇಜಿನಿಂದ ನೀಡಲಾಗಿರುವ Form-16ಗಳನ್ನು ಸಮಿತಿಗೆ ಸಲ್ಲಿಸಿದ್ದಾರೆ. ದಾಖಲೆ ಪರಿಶೀಲಿಸಿದಾಗ 2003–04ರ Income Tax returns ನಲ್ಲಿ ರೂ.65,135/– ಹಾಗೂ 2004–05ರಲ್ಲಿ ರೂ.1,03,674/– ಹಾಗೂ 2005–06ರಲ್ಲಿ ರೂ.1,52,573/– ಗಳನ್ನು Income from Business/Profession ಎಂದು ಪ್ರಕಟಿಸಲಾಗಿದೆ. (ಅನುಬಂಧ–2)

ಈ ವಿವರಣೆಯನ್ನು ಒಪ್ಪಬಹುದು ಎಂದು ಸಮಿತಿಯು ಅಭಿಪ್ರಾಯಿಸಿದೆ.

4. ಅಧಿಕಾರ ದುರ್ಬಳಕೆ :

ಡಾ. ಬಿ.ಸಿ.ರವಿ ಕುಮಾರ್ ರವರು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಅಧಿಕಾರ ದುರ್ಬಳಕೆಯಿಂದ ಸರ್ಕಾರಕ್ಕೆ ನಷ್ಟವಾಗುತ್ತಿರುವುದಾಗಿ ದೂರುದಾರರು ಆರೋಪಿಸಿದ್ದು, ವಿಚಾರಣಾ ಸಮಯದಲ್ಲಿ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ.

ಈ ಆರೋಪದ ಬಗ್ಗೆ ಯಾವುದೇ ದಾಖಲೆಗಳಿಲ್ಲದಿರುವುದರಿಂದ ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಸಮಿತಿಗೆ ಸಾಧ್ಯವಿಲ್ಲ.

5. ವಿವಿಧ ತನಿಖೆಗಳು:

ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರ ವಿರುದ್ಧ ಅನೇಕ ದೂರುಗಳಿದ್ದರೂ ಸಹ ಯಾವುದೇ ತನಿಖೆ ಅಥವಾ ವಿಚಾರಣೆ ನಡೆಸಿರುವುದಿಲ್ಲ ಎಂದು ದೂರುದಾರರು ಆರೋಪಿಸಿದ್ದಾರೆ. ವಿಚಾರಣೆ ಸಮಯದಲ್ಲಿ ಡಾ. ಬಿ.ಸಿ.ರವಿಕುಮಾರ್ ರವರು ತಮ್ಮ ವಿರುದ್ಧ ಈಗಾಗಲೇ ಹಲವು ವಿಚಾರಣೆಗಳು ನಡೆದಿದ್ದು, ಎಲ್ಲಾ ವಿಚಾರಣೆಗಳಲ್ಲಿ ತಮ್ಮ ಮೇಲಿನ ಯಾವುದೇ ಆರೋಪ ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ.

ಆದುದರಿಂದ ಈ ಆರೋಪದ ಬಗ್ಗೆ ಅಭಿಪ್ರಾಯ ನೀಡಲು ಸಮಿತಿಗೆ ಸಾಧ್ಯವಾಗುತ್ತಿಲ್ಲ.

## ವಿಚಾರಣಾ ವರದಿಯ ಸಾರಾಂಶ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ ಶ್ರೀ ಹೆಚ್.ಆರ್. ರಮೇಶ್ ಕುಮಾರ್ ರವರು ಆರೋಪಿಸಿರುವ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಸಮಿತಿಯು ಪರಿಶೀಲಿಸಿದ್ದು, ಡಾ. ಬಿ.ಸಿ.ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ರವರಿಗೆ ಕೆ.ವಿ.ಜಿ.ಮೆಡಿಕಲ್ ಕಾಲೇಜ್, ಸುಳ್ಯ, ದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ನೀಡಿದಾಗ 15 ತಿಂಗಳುಗಳ ಭೋಧನಾ ಅನುಭವದ ಕೊರತೆ ಇದ್ದು, ಇದು ಎಂ.ಸಿ.ಐ. ನಿಯಮಗಳನ್ವಯ ಬೋಧನಾ ನ್ಯೂನತೆ ಎಂದು ಪರಿಗಣಿಸಬಹುದಾಗಿರುತ್ತದೆ. ಉಳಿದ ದೂರಿನ ಅಂಶಗಳಾದ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ, ಅಧಿಕಾರ ದುರ್ಬಳಕೆ, ವಿವಿಧ ತನಿಖೆಗಳ ಬಗ್ಗೆ ಅಭಿಪ್ರಾಯ ನೀಡಲು ದಾಖಲೆಗಳನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ.

3/1/2018

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ

ನಿರ್ದೇಶಕರು ಹಾಗೂ ಡೀನ್
ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ

ಅನುಬಂಧ – 03

ಕರ್ನಾಟಕ ಸರ್ಕಾರ

# ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ಸಂಖ್ಯೆ: ಬೌಲೇಕವೈವಿಸಂಸಂ/75/2019–20

ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ
ಬೆಂಗಳೂರು, ದಿನಾಂಕ: 31.05.2019.

ರವರಿಗೆ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ),
ಬೆಂಗಳೂರು.

ಮಾನ್ಯರೆ,

ವಿಷಯ: ಡಾ: ಬಿ.ಸಿ. ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ವಿರುದ್ಧ ಇರುವ ಆರೋಪಗಳ ಕುರಿತಂತೆ ನಡೆಸಲಾಗಿರುವ ಹೆಚ್ಚಿನ ವಿಚಾರಣಾ ವರದಿ ಸಲ್ಲಿಸುವ ಬಗ್ಗೆ..

******

ಡಾ: ಬಿ.ಸಿ. ರವಿಕುಮಾರ್, ನಿರ್ದೇಶಕರು, ಹಿಮ್ಸ್, ಹಾಸನ ಇವರು ಕೆ.ವಿ.ಜಿ. ವೈದ್ಯಕೀಯ ಕಾಲೇಜಿನಲ್ಲಿ ಸೇವೆ ಸಲ್ಲಿಸಿರುವುದಾಗಿ ಸುಳ್ಳು ಬೋಧನಾ ಅನುಭವ ಪ್ರಮಾಣ ಪತ್ರದ ಕುರಿತಂತೆ ತನಿಖಾ ಸಮಿತಿ ನಡೆಸಲಾಗಿರುವ ಹೆಚ್ಚಿನ ವಿಚಾರಣಾ ವರದಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು ಹಾಗೂ ಡೀನ್,
ಬಿಎಲ್‌ಸಿಎಂಸಿ&ಆರ್‌ಐ, ಬೆಂಗಳೂರು

## ಹೆಚ್ಚಿನ ವಿಚಾರಣಾ ವರದಿ

ವಿಷಯ: ಡಾ: ಬಿ.ಸಿ. ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ವಿರುದ್ಧ ಇರುವ ಆರೋಪಗಳ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಆಕುಕ 158 ಕೆವಿಎಂ 2018, ದಿನಾಂಕ: 30.04.2019.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ: ಬಿ.ಸಿ. ರವಿಕುಮಾರ್, ನಿರ್ದೇಶಕರು, ಹಿಮ್ಸ್, ಹಾಸನ ಇವರು ಕೆ.ವಿ.ಜೆ. ವೈದ್ಯಕೀಯ ಕಾಲೇಜಿನಲ್ಲಿ ಸೇವೆ ಸಲ್ಲಿಸಿರುವುದಾಗಿ ಸುಳ್ಳು ಬೋಧನಾ ಅನುಭವ ಪ್ರಮಾಣ ಪತ್ರದ ಕುರಿತಂತೆ ತನಿಖಾ ಸಮಿತಿ ಸಲ್ಲಿಸಿರುವ ವಿಚಾರಣಾ ವರದಿಯ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಸಮ್ಮುಖದಲ್ಲಿ ದಿನಾಂಕ: 8.5.2019 ರಂದು ಮಧ್ಯಾಹ್ನ 3.00 ಗಂಟೆಗೆ ಬಹುಮಹಡಿ ಕಟ್ಟಡದಲ್ಲಿ ನಡೆದ ಸಭೆಯಲ್ಲಿ ಡಾ. ಬಿ.ಸಿ. ರವಿಕುಮಾರ್ ರವರ ಬೋಧನಾ ಅನುಭವಕ್ಕೆ ಸಂಬಂಧಿಸಿದಂತೆ ದಾಖಲೆಗಳ ಮರು ಪರಿಶೀಲನೆ ಮಾಡಿ ಅಭಿಪ್ರಾಯ ತಿಳಿಸುವಂತೆ ಸೂಚಿಸಿರುತ್ತಾರೆ.

ಅದರಂತೆ, ತನಿಖಾ ವರದಿಯಲ್ಲಿ ತಿಳಿಸಿರುವಂತೆ ಈ ಕೆಳಕಂಡ ಎರಡು ದಾಖಲೆಗಳು ಅವಶ್ಯವಿರುತ್ತದೆ.

1. ಡಾ. ಬಿ.ಸಿ. ರವಿಕುಮಾರ್, ರವರು ನಿರ್ದೇಶಕರಾಗಿ ನೇಮಕಾತಿ/ಆಯ್ಕೆ ಮಾಡಲು ನಡೆದ ಆಯ್ಕೆ ಸಮಿತಿ ಸಭೆಯ ನಡವಳಿಯ ಪ್ರತಿ.
2. ಕೆ.ವಿ.ಜೆ. ವೈದ್ಯಕೀಯ ಕಾಲೇಜು ಹಾಗೂ ಇತರೆ ಕಾಲೇಜಿನಲ್ಲಿ ಸೇವೆ ಸಲ್ಲಿಸಿರುವ ಬೋಧನಾ ಅನುಭವ ಪ್ರಮಾಣ ಪತ್ರಗಳ ಪ್ರತಿ.

ಮುಖ್ಯ ಆಡಳಿತಾಧಿಕಾರಿಗಳು, ಹಿಮ್ಸ್, ಹಾಸನ ರವರು ಮೇಲ್ಕಂಡ ದಾಖಲೆಗಳನ್ನು ದಿನಾಂಕ: 28.05.2019 ರಂದು ಸಲ್ಲಿಸಿರುತ್ತಾರೆ.

ಹಿಮ್ಸ್, ಹಾಸನ ರವರು ಸಲ್ಲಿಸಿರುವ ದಾಖಲೆಗಳ ಪ್ರಕಾರ ಪಿ.ಜಿ.ಐ., ಚಂಢೀಗಡ ನಲ್ಲಿ 5 ತಿಂಗಳ ಸೀನಿಯರ್ ರೆಸಿಡೆಂಟ್ ಬೋಧನಾ ಅನುಭವ, ಕಸ್ತೂರಬಾ ಮೆಡಿಕಲ್ ಕಾಲೇಜ್, ಮಣಿಪಾಲದಲ್ಲಿ 3 ವರ್ಷ 6 ½ ತಿಂಗಳ ಸಹಾಯಕ ಪ್ರಾಧ್ಯಾಪಕರ ಅನುಭವ, ಕೆ.ವಿ.ಜೆ. ಕಾಲೇಜಿನಲ್ಲಿ 1 ವರ್ಷ 5 ½ ತಿಂಗಳು ಸಹಾಯಕ ಪ್ರಾಧ್ಯಾಪಕರ ಅನುಭವ ಮತ್ತು ಅದೇ ಕಾಲೇಜಿನಲ್ಲಿ 3 ವರ್ಷ 10 ತಿಂಗಳು ಸಹ ಪ್ರಾಧ್ಯಾಪಕರಾಗಿ ಅನುಭವ ಇರುವುದಾಗಿ ತಿಳಿಸಿರುತ್ತಾರೆ. ಈ ಎಲ್ಲದರ ಒಟ್ಟು ಬೋಧನಾ ಅನುಭವ 9 ವರ್ಷ 3 ತಿಂಗಳು ಗಳಾಗಿರುತ್ತದೆ. ಆದರೆ, ಕೆ.ವಿ.ಜೆ. ವೈದ್ಯಕೀಯ ಕಾಲೇಜಿಗೆ ಎಲ್.ಓ.ಪಿ. ದೊರಕಿದ ನಂತರದ ಬೋಧನಾ ಅನುಭವವನ್ನು ಗಣನೆಗೆ ತೆಗೆದುಕೊಂಡರೆ ಅವರ ಒಟ್ಟು ಅನುಭವದಲ್ಲಿ ಒಂದು ವರ್ಷದ ಬೋಧನಾ ಅನುಭವದ ಕೊರತೆ ಕಂಡುಬರುತ್ತದೆ.

| | |
|---|---|
| ಮುಖ್ಯ ಆಡಳಿತಾಧಿಕಾರಿಗಳು | 31/5/19<br>ನಿರ್ದೇಶಕರು ಹಾಗೂ ಡೀನ್, |
| ಬಿಎಂಸಿಆರ್ಐ, ಬೆಂಗಳೂರು | ಬಿಎಲ್‌ಸಿಎಂಸಿ&ಆರ್ಐ, ಬೆಂಗಳೂರು |

ಅನುಬಂಧ –04

(6

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 64 ಕೆವಿಎಂ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.02.2020

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

**ಇವರಿಗೆ:**
ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
4ನೇ ಮಹಡಿ, 5ನೇ ಹಂತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
ದಿನಾಂಕ 7/2/2020
ಬೆಂಗಳೂರು

ಮಾನ್ಯರೆ,

**ವಿಷಯ:** ಹೆಚ್.ಆರ್.ಸಿ ಸಂಖ್ಯೆ:864/10/12/2017(ಬಿ-2)ರ ಪ್ರಕರಣದ ಬಗ್ಗೆ.
**ಉಲ್ಲೇಖ:** ತಮ್ಮ ಪತ್ರ ಸಂಖ್ಯೆ:ಮಾ.ಹ.ಆ.864/10/12/2017(ಬಿ-2), ದಿನಾಂಕ :28.02.2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ. ಡಾ|| ಬಿ.ಸಿ. ರವಿಕುಮಾರ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ವಿರುದ್ಧ ಶೈಕ್ಷಣಿಕ ಅರ್ಹತೆ, ಅಧಿಕಾರ ದುರುಪಯೋಗ ಮತ್ತು ಇತರೆ ಆರೋಪಗಳ ಕುರಿತಂತೆ ಶ್ರೀ ಹೆಚ್.ಆರ್.ರಮೇಶ್‌ಕುಮಾರ್ ಇವರು ಸಲ್ಲಿಸಿರುವ ದೂರಿನ ಬಗ್ಗೆ ನಿಯಮಾನುಸಾರ ಪರಿಶೀಲಿಸಿದ್ದು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರ ತಾಂತ್ರಿಕ ಅಭಿಪ್ರಾಯದ ಮೇರೆಗೆ ಸದರಿಯವರ ಮೇಲಿನ ಆರೋಪಗಳು ಸಾಬೀತಾಗದೆ ಇರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಆಯೋಗದ ಗಮನಕ್ಕೆ ತರುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ,

05/02/2020

(ಬಿ.ವಿ.ಮಾರುತಿ ಪ್ರಸನ್ನ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ವೈದ್ಯಕೀಯ ಶಿಕ್ಷಣ ಇಲಾಖೆ.

ಅನುಬಂಧ-5

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

### ಹೊಸದಾಗಿ ರೂಪಿಸಿ, ಅನುಷ್ಠಾನಗೊಳಿಸಲಾಗಿರುವ ಯೋಜನೆಗಳ ಮಾಹಿತಿ ಹಾಗೂ ಅವುಗಳ ಸ್ಥಿತಿಗತಿಗಳ ಕುರಿತು

| ಕ್ರಮ ಸಂಖ್ಯೆ | ಕಾಮಗಾರಿಗಳ ವಿವರ | ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ (ರೂ. ಲಕ್ಷಗಳು) | ಬಿಡುಗಡೆಯಾದ ಮೊತ್ತ | ಷರಾ |
|---|---|---|---|---|
| 1 | ಬಾಲಕ-ಬಾಲಕಿಯರ ಹಾಸ್ಟೆಲ್ ಕಟ್ಟಡ ನಿರ್ಮಾಣ (ಎ & ಬಿಬ್ಲಾಕ್), | 1200.00 | 1200.00 | ಕಾಮಗಾರಿ ಪೂರ್ಣಗೊಂಡಿದೆ |
| 2 | ಪರೀಕ್ಷಾ ಕೊಠಡಿ, ಗ್ಯಾಲರಿ ಟೈಪ್ ಉಪನ್ಯಾಸ ಕೊಠಡಿ ಮತ್ತು ಇತರೆ ಸಂಬಂಧಿತ ಕಾಮಗಾರಿಗಳು | 315.00 | 315.00 | ಕಾಮಗಾರಿ ಪೂರ್ಣಗೊಂಡಿದೆ |
| 3 | ಹಿಮ್ಸ್ ಸಂಸ್ಥೆಯ 350 ರಿಂದ 750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಿದ ಆಸ್ಪತ್ರೆ ಕಟ್ಟಡಕ್ಕೆ 4 ಲಿಫ್ಟ್‌ಗಳನ್ನು ಅಳವಡಿಸುವ ಕಾಮಗಾರಿ (Providing & Installation of 20 Passengers 4 Bed Lift) | 190.00 | 190.00 | ಕಾಮಗಾರಿ ಪೂರ್ಣಗೊಂಡಿದೆ |
| 4 | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನೂತನ 450 ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿ | 11714.91 | 11714.91 | ಕಾಮಗಾರಿಗಳು ಪೂರ್ಣಗೊಂಡಿದೆ |
| 5 | ಹಳೆ ಆಸ್ಪತ್ರೆ ಕಟ್ಟಡದ ಓ.ಬಿ.ಜಿ. ಮತ್ತು ಓ.ಟಿ. ವಿಭಾಗಗಳ ಮೇಲ್ಭಾಗದಲ್ಲಿ 300 ಹಾಸಿಗೆಗಳಿಗೆ ಮೇಲ್ದರ್ಜೆ ಗೇರಿಸುವ ಕಟ್ಟಡ ಕಾಮಗಾರಿ | 1154.91 | 1154.91 | ಕಾಮಗಾರಿಗಳು ಪೂರ್ಣಗೊಂಡಿದೆ |
| 6 | ಬಾಲಕ ಮತ್ತು ಬಾಲಕಿಯರ ಹೆಚ್ಚುವರಿ ಹಾಸ್ಟೆಲ್ ಕಟ್ಟಡ ನಿರ್ಮಾಣ-(ಸಿ&ಡಿ. ಬ್ಲಾಕ್) | 1667.32 | 1667.32 | ಕಾಮಗಾರಿಗಳು ಪೂರ್ಣಗೊಂಡಿದೆ |
| 7 | ಶುಶ್ರೂಷಕರ ವಸತಿ ನಿಲಯ ಕಟ್ಟಡ ಕಾಮಗಾರಿಗಳು (ಎ &ಬಿ ಬ್ಲಾಕ್) | 1667.32 | 1667.32 | ಕಾಮಗಾರಿ ಪ್ರಗತಿಯಲ್ಲಿದೆ |
| 8 | ಹಿಮ್ಸ್ ಸಂಸ್ಥೆಯ ಕೇಂದ್ರ ಗ್ರಂಥಾಲಯವನ್ನು ಡಿಜಿಟಲ್ ಲೈಬ್ರರಿಯಾಗಿ ಮಾರ್ಪಡಿಸಲು ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳು | 45.50 | 45.50 | ಕಾಮಗಾರಿಗಳು ಪೂರ್ಣಗೊಂಡಿದೆ |
| 9 | ಹಿಮ್ಸ್ ಸಂಸ್ಥೆಯ ಮಿಣಿ ಜೀವಶಾಸ್ತ್ರ ವಿಭಾಗದಲ್ಲಿ ವೈರಸ್ ರಿಸರ್ಚ್ ಮತ್ತು ಡಯಾಗ್ನೋಸ್ಟಿಕ್ ಲ್ಯಾಬೊರೆಟರಿಯ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು | 49.95 | | ಕಾಮಗಾರಿಗಳು ಪೂರ್ಣಗೊಂಡಿದೆ |
| 10 | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣ | 5437.89 | 5437.89 | ಕಾಮಗಾರಿ ಪ್ರಗತಿಯಲ್ಲಿದೆ |
| 11 | ಹಿಮ್ಸ್ ಸಂಸ್ಥೆಯ ಅಂಕಾಲಜಿ ವಿಭಾಗದ ಕ್ಯಾನ್ಸರ್ ಕೇರ್ ಘಟಕದ ಬಾಬಾ ಟ್ರಾನ್-2 ಯಂತ್ರವನ್ನು ಬಾಬಾ ಟ್ರಾನ್-3ಐಕೆ ಮೇಲ್ದರ್ಜೇಗೇರಿಸುವುದು | 384.36 | 200.00 | ಕಾಮಗಾರಿ ಪ್ರಗತಿಯಲ್ಲಿದೆ |
| 12 | ಸ್ನಾತಕೋತ್ತರ ಬಾಲಕ-ಬಾಲಕಿಯರ ವಿದ್ಯಾರ್ಥಿಗಳ ಹಾಸ್ಟಲ್ ಕಟ್ಟಡ, | 2400.00 | 3700.00 | ಕಾಮಗಾರಿಗಳು ಪ್ರಗತಿಯಲ್ಲಿದೆ |
| 13 | ಹೆಚ್ಚುವರಿ ಗ್ರಂಥಾಲಯ ಕಟ್ಟಡ , | 1000.00 | | |
| 14 | ವೈದ್ಯರ ವಸತಿ ಗೃಹ ಕಟ್ಟಡ | 1202.00 | | |
| 15 | ಸಿ.ಎಸ್.ಆರ್. ಯೋಜನೆ ಅಡಿಯಲ್ಲಿ ಈ ಸಂಸ್ಥೆಯಲ್ಲಿ Human Milk Bank ಸ್ಥಾಪನೆ | 40.00 | 40.00 | ಕಾಮಗಾರಿ ಪೂರ್ಣಗೊಂಡಿದೆ |

ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅನುಬಂಧ-6

# Hassan Institute of Medical Sciences, Hassan

## Covid-19 Equipment Purchased under SDRF Fund Details

| SL NO | SUPPLIER | DESCRIPTION | Qty | Expenditure in Rupees |
|---|---|---|---|---|
| 1 | M/S Agathies Technologies | finger tip pulse oximeter | 70 | 999600 |
| 2 | | Three Para Monitor | 5 | |
| 3 | | Syringe Pump | 5 | |
| 4 | | infusion pump | 5 | |
| 5 | | Defibrillator | 1 | |
| 6 | M/s Med Centre | ECG machine for covid-19 wards | 4 | 188160 |
| 7 | M/s Sai Enterprises | BP Apparatus digital | 50 | 98000 |
| 8 | M/s Glowmed Sales & Service OPC Pvt. Ltd. | Finger tip pulse oxy-meter, nebulizer, stethoscope, infrared thermometer | 110 | 161000 |
| 9 | M/s Philips India Pvt. Ltd | Adult cardiac probe for ultra sound machine | 1 | 383685 |
| 10 | M/s Philips India Pvt. Ltd | Adult Linear probe for ultra sound machine | 1 | 262080 |
| 11 | M/s Foress Healthcare | X-Ray cassettes for CR System | 10 | 900000 |
| 12 | M/s Phoenix Medical System Pvt. Ltd. | Aerosol Box | 5 | 27500 |
| 13 | M/s K.K.Allianze | Multipara Monitor | 20 | 800000 |
| 14 | M/s Med Centre | Infusion pump | 6 | 174000 |
| 15 | M/s Gentec Medical Pvt. Ltd. | Syringe pump | 6 | 174000 |
| 16 | M/S Bangalore Medical System | RT-PCR Instrument 96 Well block with computer | 1 | 1652000 |
| 17 | Crystal Bio Equipment Bangalore | Biosafety Cabinet Class II type A2 With V Guard stabilizer | 1 | 531000 |
| 18 | Crystal Bio Equipment Bangalore | Deep freezer (-80 C) | 1 | 1000000 |
| 19 | Crystal Bio Equipment Bangalore | Vestfrost /Celfrost -20 C | 1 | 150000 |
| 20 | Eppendroff India Pvt Ltd | Micro Pipettes set with stand (06 pack ) 0.1-2.5, 0.5-10, 2-20, 10-100, 20-200 100-1000 | 1 | 82600 |
| 21 | MS Kothari Distributors Bangalore | Micro Pipettes set with stand (06 pack ) 0.1-2.5, 0.5-10, 2-20, 10-100, 20-200 100-1000 | 1 | 94400 |

| | | | | |
|---|---|---|---|---|
| [illegible]2 | MS Kothari Distributors Bangalore | Electronic E3 Multipipette with charger | 1 | 82[illegible]2 |
| 23 | Prajwal Surgical & scientific | Procurement of D-Type Filled Medical Jumabo oxygen Cylinder for covid-19 | 200 | 4760000 |
| 24 | M/s Well care biomed | Automated Blood Culture System | 1 | 1275000 |
| 25 | Home Medix pvt ltd | Humidifier | 30 | 3286740 |
| 26 | Automechbot engineering service | ventilator circuits (Neonatal and Pediatrics) | 50 | 124000 |
| 27 | Wipro GE Healthcare pvt ltd | Upgradation of SLE 6000 ventilator with HFO | 6 | 2550000 |
| 28 | Genist technocracy | ETO gas sterilizer | 1 | 569000 |
| 29 | Union Bio med Pvt. Ltd | Backup Maniforld system with allied for oxygen supply in covid hospital | 1 | 1808244 |

Director
HIMS Hassan

# Hassan Institute of Medical Sciences, Hassan

## Covid-19 Equipment Purchased under 103 HOA & Users Fund Details

| SL NO | SUPPLIER | DESCRIPTION | Qty | Expenditure (in Rs.) |
|---|---|---|---|---|
| 1 | K K Allianze | Multipara Monitor 12" | 2 | 148000 |
| 2 | | Multipara Monitor 15" | 1 | 74000 |
| 3 | | LED Laryngoscope with blad | 5 | 24750 |
| 4 | South indian sugicals | Digital BP Apparatus | 25 | 41250 |
| 5 | | Digital BP Apparatus | 25 | 53250 |
| 6 | | weighing scale | 10 | 15000 |
| 7 | | stethoscope | 30 | 15000 |
| 8 | MC Dalal and co | Finger tip pulse oxymeter | 50 | 109200 |
| 9 | | nebulizer | 30 | 82992 |
| 10 | Medbidz | Adult video Laryngoscope | 2 | 425600 |
| 11 | | Macoys Laryngoscope with handle | 10 | 25000 |
| 12 | Wipro GE Healthcare pvt ltd | 100 MA Portable x-ray machine | 1 | 350000 |
| 13 | Sai enterprises | Thermameter Infrared | 5 | 31270 |
| 14 | S S Enterprises | 1 ltr toucheless sanitizer dispensor | 7 | 14000 |
| 15 | | 1 ltr toucheless sanitizer dispensor | 3 | 6750 |
| 16 | | 1 ltr toucheless sanitizer dispensor | 6 | 15000 |
| 17 | | 1 ltr toucheless sanitizer dispensor | 1 | 6500 |
| 18 | cronus medical system | Micro suction apparatus | 4 | 60480 |
| 19 | Helix Pvt Ltd | Medical oxygen cylinder | 19 | 325090 |
| 20 | Helix Pvt Ltd | Medical oxygen cylinder | 10 | 171100 |

Direcrtor
HIMS, Hassan

# HASSAN INSTITUTE OF MEDICAL SCIENCES, HASSAN.

Purchased Under NRHM Fund

| Sl No | Name of the Items procured | Amount of Procurement (In Rs.) |
|---|---|---|
| 1 | Adult Video laryngoscope | 851,200.00 |
| | | |
| | Total | 851,200.00 |

Direcrtor
HIMS, Hassan